ಎ.ಕೆ. ಪಟ್ಟಾಭಿ, ಬೆಂಗಳೂರು
ಹೆಂಗಸರ ಬಾಯಿ ತೆರೆಸಿಯೂ ಮಾತನಾಡದಂತೆ ಮಾಡಬಲ್ಲವನು ಯಾರು?



ಒಬ್ಬನಲ್ಲ, ಇಬ್ಬರು. ನಾಲಿಗೆಕೊರಕ (ಟಂಗ್ ಪಿಯರ್ಸರ್), ದಂತವೈದ್ಯ.

ಹೇಮಾವತಿ ಜೈನ್, ಹೂವಿನಹಡಗಲಿ
'ಕೇಳಿದಿರಿ' ಕೊಳದಲ್ಲಿ ಸ್ಫಟಿಕಸಹಜ ಉತ್ತರ ಮುತ್ತುಗಳಿವೆ. ಹೆಕ್ಕಿಕೊಳ್ಳಲೆ ಸಾರ್?
ಹೆಕ್ಕಿ ನಗೆ'ಸರ'ದಲ್ಲಿ ಪೋಣಿಸಿಕೊಳ್ಳಿ. ಓದುಗರ ಪ್ರಶ್ನೆಯ ಚಿಪ್ಪಿನಿಂದಲೇ ಉದ್ಭವಿಸಿದ ಮುತ್ತುಗಳವು.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
ಜಾತ್ಯತೀತ ಸಂವಿಧಾನದ ಈ ದೇಶದಲ್ಲಿ ಜಾತಿವ್ಯವಸ್ಥೆ ನಾಶವಾಗುವುದು ನಿಜವೇ ರಾಂ?
ಜಾತಿ 'ವ್ಯವಸ್ಥೆ' ಎನ್ನುವವರೆಗೆ ಅಸಾಧ್ಯ. ಮನೆಯಲ್ಲಿ ಜಾತಿ 'ವ್ಯವಸ್ಥೆ'. ದೇಶಕ್ಕೆ ಅದು 'ಅವ್ಯವಸ್ಥೆ'.

ಆರ್. ಸುನೀಲ್ ತರೀಕೆರೆ
ಈಗಿನ ಸಿನಿಮಾಗಳ ಟೀಸರ್ ಬಿಡುಗಡೆ ಹಿಟ್... ಆಡಿಯೋ ಲಾಂಚ್ ಹಿಟ್... ಸಿನಿಮಾ ಮಾತ್ರ ತೋಪು ಯಾಕೆ?



ನಿರ್ಮಾಪಕರೇ ಇದಕ್ಕೆ ಮಾಡಿದಂತೆ ಅದಕ್ಕೂ ಖರ್ಚು ಮಾಡಿದರೆ ಹಿಟ್ ಆಗತ್ತೆ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
ಮೊದಲ ರಾತ್ರಿಯಂದು ಶಯನಗೃಹದಲ್ಲಿ ಹಣ್ಣುಗಳನ್ನು ಏಕೆ ಇಟ್ಟಿರುತ್ತಾರೆ?
ಸರಸವಿರಲಿ ಎಂದು ಸೂಚಿಸಲು.

ಎಂ.ಎ. ಕುಮಾರ್, ಬೆಂಗಳೂರು
ಸೋತ ನುರಿತ ರಾಜಕಾರಣಿಗಳು ನಾಟಕಮಂಡಳಿ ಶುರು ಮಾಡಿದರೆ ಹೇಗೆ ರಾಮ್?
ಸೂಪರ್ ಐಡಿಯ. ಖಳ ಪಾತ್ರಗಳಂತೂ ಸಖತ್ ವಿಜೃಂಭಿಸುತ್ತವೆ.

ಎಸ್.ಎನ್. ಮಹಾಬಲರಾವ್, ಎನ್ನಾರ್‌ಪುರ
ಮಗಳು ಜಾನಕಿ ಪ್ಯಾಂಟು ಧರಿಸಿದ್ದು ಹೆಣ್ಣುತನಕ್ಕೆ ಧಕ್ಕೆ ಅಲ್ಲವೆ?
ಅಕ್ಕಮಹಾದೇವಿ ವಿವಸ್ತ್ರಳಾಗಿಯೂ ಪೂಜ್ಯಳು. ಹೆಣ್ತನದ ಧಕ್ಕೆಗೆ ಕಾರಣ ಅವಳ ಸೃಷ್ಟಿಯಲ್ಲ, ಸಮಾಜದ ದೃಷ್ಟಿ.

ಎಚ್. ಸೀತಾರಾಮರಾವ್, ಹೊಸಬಾಳೆ
ಪ್ರಶ್ನೋತ್ತರ ವಿಭಾಗವು ಈ ಹಿಂದೆ ಯಾವ ಕನ್ನಡ ಪತ್ರಿಕೆಯಲ್ಲಿ ಶುರುವಾಯಿತು? ಯಾರು ಉತ್ತರಿಸಿದರು?
ಮೊದಲ ಕನ್ನಡಶಾಲೆಯ ಪ್ರಶ್ನೆಪತ್ರಿಕೆಗಳಲ್ಲಿ. ವಿದ್ಯಾರ್ಥಿಗಳು ಉತ್ತರಿಸಿದರು.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
ಅತ್ಯಂತ ಮಧುರವಾದ ಹಾಡು ಯಾವುದು?
ಮಾರ್ಡನ್ ಮ್ಯೂಸಿಕ್ಕಿನ ಹುಚ್ಚುಸದ್ದಿನ ನಂತರದ ಮೌನ.

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ಭಾಗ್ಯದ ಬಾಗಿಲು ತೆರೆಯುವುದು ಯಾವಾಗ?
ಮೌಢ್ಯ, ಸೋಮಾರಿತನದ ಬಾಗಿಲು ಮುಚ್ಚಿದಾಗ.

ರತ್ನಾ ರಾಜ್‌ಕುಮಾರ್, ಹಾಸನ
ಮಹಾಭಾರತವು ನನಗೆ ಅಷ್ಟೊಂದು ಇಷ್ಟವಾಗಲು ಯಾವ ಕಾರಣವನ್ನು ನಿಮಗೆ ಕೊಡಲಿ...?
ಏಕೆ ಕೊಡಬೇಕು? ದ್ವೇಷ, ಮತ್ಸರಗಳಿಗೆ ಕಾರಣ ಬೇಕು. ಪ್ರೀತಿಗೆ ಕಾರಣವೇ ಬೇಕಾಗಿಲ್ಲ.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ
ಹಣ ಕಂಡರೆ ಹೆಣವೂ ಬಾಯಿ ಬಿಡುತ್ತಂತೆ. ನೀವು ಬಾಯಿ ಬಿಟ್ಟಿರುವ ಹೆಣವನ್ನು ನೋಡಿದ್ದೀರಾ?
ಓ. ವಿಧಾನಸೌಧ, ಪಾರ್ಲಿಮೆಂಟುಗಳಲ್ಲಿ ಹೆಚ್ಚಾಗಿ ಇರುವುದೇ ಮನುಷ್ಯತ್ವ ಸತ್ತ ಹೆಣಗಳು.

ಹರಿತಸ, ಬೆಂಗಳೂರು
ಭ್ರಷ್ಟಾಚಾರಕ್ಕೆ ಆದಿ ಮತ್ತು ಅಂತ್ಯ ಯಾವಾಗ?
ಪ್ರತಿ ಸರ್ಕಾರಿ ಆಫೀಸಲ್ಲಿ ಪ್ರತಿದಿನ 9.30ಕ್ಕೆ ಆದಿ, 6ಕ್ಕೆ ಅಂತ್ಯ.

## ಬಹುಮಾನಿತ ಪ್ರಶ್ನೆ

ಗಂಜಾಂ ನಾಗರಾಜ, ಮೈಸೂರು
ನಾವು ಬೆಳಿಗ್ಗೆ ಎದ್ದೊಡನೆ ಏನು ಮಾಡಬೇಕು? ಸ್ವಲ್ಪ ಸೀರಿಯಸ್ ಆಗಿ ಉತ್ತರಿಸಿ ಪ್ಲೀಸ್...?
ಸೀರಿಯಸ್ ಆಗಿರದೆ ನಸುನಗುತ್ತಾ ಹೊರಬರಬೇಕು. ನಗುಮುಖ ಮತ್ತಷ್ಟು ನಗುಮುಖಗಳ ಜನಕ.

ಗುರು, ಕೋಟೇಶ್ವರ
ನೀವು ಉತ್ತರಗಳನ್ನು ಬರೆಯುವುದಕ್ಕೆ ನಿಮ್ಮ ಪತ್ನಿಯೇ ಸ್ಫೂರ್ತಿಯೇನು ರಾಮ್?
ನಿಮ್ಮ ಪತ್ನಿಯೂ ಆಗಬಹುದು. ನಮ್ಮದು 'ವಸುಧೈವ ಕುಟುಂಬಕಂ' ಚಿಂತನೆ.

ಎಚ್.ಆರ್. ದೇಸಾಯಿ, ರಾಯಚೂರು
1 ತಲೆ ಇರುವ ಮನುಷ್ಯ ಏನೇನೋ ಸಾಧಿಸಿದ. 4 ತಲೆಯ ಬ್ರಹ್ಮ, ಹತ್ತು ತಲೆಯ ರಾವಣ ಏನು ಸಾಧಿಸಿದರು?
ದಶ ಆನನಕ್ಕಿಂತ ದಿಶೆ ಆನನ, ಚತುರ್ಮುಖಕ್ಕಿಂತ ಚತುರ ಮುಖ ಮುಖ್ಯವೆಂದು ತೋರಿದ್ದಾರಲ್ಲ.

ಕಾವ್ಯಶ್ರೀ ಪತ್ರಿಮಠ, ಸುರಪುರ
'ಕಣ್ಣಿನ' ಭಾಷೆ ಯಾವುದು?



iris ಭಾಷೆ.

ನಾಜ್ಯೋತಿ, ಹೂವಿನಹಡಗಲಿ
ವಸ್ತುಗಳಿಗೆ ಘನ, ದ್ರವ, ಅನಿಲ ಸ್ಥಿತಿಗಳಿವೆ. ಮನಸ್ಸಿನ ಸ್ಥಿತಿ ಯಾವುದು?
ಮಾರ್ದವ ಸ್ಥಿತಿ, ಉಪದ್ರವ ಸ್ಥಿತಿ.

ಎಚ್.ಕೆ. ವಿಜಯಕುಮಾರ್, ರಾಯಚೂರು
ಸಾರ್ವಜನಿಕರ ಮುಂದೆ ಕಣ್ಣೀರ ಕೋಡಿ ಹರಿಸುವ ರಾಜಕಾರಣಿಗಳ ಸಂಖ್ಯೆ ದಿನೇ ದಿನೇ ಏಕೆ ಹೆಚ್ಚುತ್ತಿದೆ?
ಗೋಳು ಸೀರಿಯಲ್‌ಗಳು ಕ್ಲಿಕ್ ಆಗುತ್ತಿರುವುದರಿಂದ ಇವರೂ ಗೋಳಾಡಿದರೆ ಕ್ಲಿಕ್ ಆಗುವರೆಂಬ ಭ್ರಮೆ.

■ ರಾಮ್